<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.131/2023</u>

ದಿಃ 25.06.2025

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-6 Pw-6

| | | |
|---|---|---|
| ಹೆಸರು | ಃ | ನವೀನ್ ಕುಮಾರ್ |
| ತಂದೆಯ ಹೆಸರು | ಃ | ಚಿಕ್ಕರಾಜು |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಮತ್ತಿಕೆರೆ,<br>ಚನ್ನಪಟ್ಟಣ ತಾಲ್ಲೂಕು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಈಗ ಸುಮಾರು 2-3 ವರ್ಷಗಳ ಹಿಂದೆ ಪೊಲೀಸರು ಚಾಸಾ.1 ಮತ್ತು 1ನೇ ಆರೋಪಿ ಇದ್ದಂತ ಮನಗೆ ಮಹಜರ್ ಮಾಡಲು ಬಂದಿದ್ದರು. ಅಲ್ಲಿ ಪೊಲೀಸರು ನನಗೆ ಸಹಿ ಮಾಡಲು ಹೇಳಿದ್ದ ಕಾರಣ, ನಾನು ಸಹಿ ಮಾಡಿರುತ್ತೇನೆ. ಸ್ಥಳ ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದಾಗ ಬೆಳಿಗ್ಗೆ 11.00ರಿಂದ 12.00 ಗಂಟೆ ಸಮಯವಾಗಿತ್ತು. ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ವಿಚಾರಕ್ಕೆ ಸಂಬಂಧಿಸಿದಂತೆ ಮಹಜರ್ ಮಾಡಿರುತ್ತಾರೆ ಎಂದೂ ಕೂಡ ನನಗೆ ಗೊತ್ತಿಲ್ಲ. ನನ್ನ ಜೊತೆ ಬೇರ್ಯಾರೂ ಸಹಿ ಮಾಡಿರುವುದಿಲ್ಲ. ಮಹಜರ್ ನಿ.ಪಿ.2 ಇದ್ದು, ಸಾಕ್ಷಿ ಒಪ್ಪಿಕೊಂಡಿರುವ ತನ್ನ

ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಪೊಲೀಸರು ಎರಡು ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಛಾಯಾಚಿತ್ರದಲ್ಲಿ ನಾನೂ ಸಹ ಇದ್ದೇನೆ ಎಂದರೆ ಸರಿ. ಅವುಗಳನ್ನು ನಿ.ಪಿ.3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ವಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿಃ07.07.2023ರಂದು ಬೆಳಿಗ್ಗೆ 10.30ರಿಂದ 11.30ರ ಸಮಯದಲ್ಲಿ ಚಾಸಾ.1 ಅಲ್ಲಿದ್ದು, ಆಕೆ ತನಗೆ ಇದೇ ಸ್ಥಳದಲ್ಲಿ ತನ್ನ ಗಂಡನಾದ 1ನೇ ಆರೋಪಿ ಹೊಡೆದು ಬಡೆದು ಹಿಂಸೆ ಕೊಡುತ್ತಿದ್ದ ಎಂದು ತೋರಿಸಿದಂತಹ ಸ್ಥಳದಲ್ಲಿ ಪೊಲೀಸರು ನಿ.ಪಿ.2ರ ಮಹಜರ್ ಬರೆದಿದ್ದು, ಆ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. 1ನೇ ಆರೋಪಿ ನಮ್ಮದೇ ಊರಿನವನಾಗಿದ್ದು, ಚಿಕ್ಕಂದಿನಿಂದಲೂ ಆತ ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಆತ ನಮ್ಮ ನೆರೆಮನೆಯವನಾಗಿರುವ ಕಾರಣ, ಮಹಜರ್ ನ ವಿಚಾರ ತಿಳಿದಿದ್ದರೂ ಸಹ, ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಜೆ.ಟಿ.ಪಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ಛಾಯಾಚಿತ್ರವನ್ನು ಯಾರು, ಎಲ್ಲಿ, ಯಾವಾಗ ತೆಗೆದಿರುತ್ತಾರೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಾನು ಆಗಾಗ್ಗೆ ಪೊಲೀಸ್ ಠಾಣೆಗೆ ಹೋಗುತ್ತಿದ್ದು, ಅಂತಹ ಒಂದು ಸಂದರ್ಭದಲ್ಲಿ ನಾನು ವುಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.